Request for a statement by ex-Minister.

Sri J. MOHAMED IMAM (Jagalur).—On a point of information. I requested the ex-Minister for Electricity if he is willing to make a statement. He said he would let us know after some time. I am anxious that he should make a statement before we deal with the Budget. I have avoided making any reference to this matter till now. By making a statement before we take up the Budget, he will greatly help us. I request him to let us know if he can oblige this House. (Addressing Sri Siddalingaiya) It is your right to make a statement.

Mr. SPEAKER.—The Hon'ble Member is requested to address the Chair. I cannot compel a member.

Sri J. MOHAMED IMAM—It is his right to make a statement before this House and let the members know the circumstances and causes that unfortunately led to his resignation so that, as I said, if he makes a statement it will greatly facilitate our work.

Mr. SPEAKER.—The other day I have already drawn the attention of the House to rule 118. There ends the matter.

BUDGET FOR 1953-54. GENERAL DISCUSSION.

Mr. SPEAKER.—We will begin discussion on the Budget. Shall we fix a time limit of 15 to 20 minutes for speaker?

Hon'ble Members.—Yes.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, 1953-54ನೇ ಬಡ್ಜೆಟ್ ಈಗ ನಮ್ಮ ಮುಂದೆ ಇರುವ ರೀತಿಯಲ್ಲಿ ಇದನ್ನು ಡಿಫಿಸಿಟ್ ಬಡ್ಜೆಟ್ಟೆಂದು ತೋರಿಸಲಾಗಿದೆ. ಈಗಾಗಲೇ ನಮ್ಮ ಸಭಾನಾಯಕರು ಒಂದು ಕೋಟಿ ಚಿಲ್ಲರೆ ಬಡ್ಜೆಟ್ಟನ್ನಲ್ಲಿ ಖೋತಾ ಬೀಳಬಹುದೆಂದು ಹೇಳಿದ್ದಾರೆ. ಆದರೆ ಆ ಖೋತಾ ಅವರು ತಿಳಿಸಿರುವುದಕ್ಕಿಂತಲೂ, ಇನ್ನೂ ಜಾಸ್ತಿಯಾಗಿರುತ್ತದೆಂದು ತಿಳಿದು ಬರುತ್ತದೆ. ಹೀಗೆ ಪ್ರತಿವರ್ಷವೂ ಈ ನಮ್ಮ ಆರ್ಥಿಕ ಸ್ಥಿತಿಯು ಬಿದ್ದುಹೋಗುತ್ತಿರುವುದು ಬಹುಶಃ ನಮ್ಮೆಲ್ಲರ ದುರದೃಷ್ಟವೆಂದು ಹೇಳಬೇಕಾಗಿದೆ. ಈ ವರ್ಷ ತಯಾರಿಸಿರುವ ಬಡ್ಜೆಟ್ಟನ್ನು ನೋಡಿದರೆ, ಹೊಸದಾಗಿ ನಾನಾ ರೀತಿಯಲ್ಲಿ ಜನರ ಮೇಲೆ ತೆರಿಗೆ, ಕಂದಾಯ, ಇತ್ಯಾದಿಗಳನ್ನು ಹಾಕಿರತಕ್ಕದ್ದು ಕಂಡುಬರುತ್ತಿದ್ದರೂ, ದೇಶಾಭಿವೃದ್ಧಿ ಸಾಧನೆಯ ಕೆಲಸಕಾರ್ಯಗಳಿಗೆ ಕೈಹಾಕಬೇಕಾದರೆ ಹಣದ ಕೊರತೆ ಇರತಕ್ಕದ್ದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಇದರಿಂದ ಮುಂದಕ್ಕೆ ನಮ್ಮ ಆಸೆ ಆಕಾಂಕ್ಷೆಗಳು ಸುಲಲಿತವಾಗಿ ಸಫಲಗೊಳ್ಳಲು ಅವಕಾಶವಿಲ್ಲವೆಂಬುದಕ್ಕೆ ನಾನು ತುಂಬಾ ವಿಷಾದಪಡುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ.

ಮೊನ್ನೆತಾನೆ ಕೆಲವು ಚುನಾವಣಾಕ್ಷೇತ್ರಗಳಲ್ಲಿ ಚುನಾವಣೆ ಜರುಗಿ ನಮ್ಮ ಪಾರ್ಟಿಗೆ ಸೋಲಾಗಿದೆ. ಈ ಸಂಬಂಧದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ.

Sri H. K. VEERANNA GOWDH (Maddur).—You had not put any candidate. He was an independent candidate.

ಶ್ರೀ ಬಿ. ಹುಚ್ಚೇಗೌಡ.—We had put a candidate; ಅದು ನಿಜ ಸ್ವಾಮಿ. ಸಿಂಬಲ್‌ಗಳನ್ನು ಸಹ ತಪ್ಪಾಗಿ ಮಾಡಿದ್ದಾರೆ. ಈ ಅಂಶವನ್ನು ಎಲೆಕ್ಷನ್ ಕಮಿಷನ್ನಿನವರು ಕೂಡ ತಿಳಿಸಿದ್ದಾರೆ. ಈ ಸಾರ್ತಿಗೆ ಇದೇ ಇರಲಿ ಮುಂದೆ ಇದನ್ನು ಬದಲಾಯಿಸೋಣ ಎಂಬುದಾಗಿ ಹೇಳಿದರು, ಆಡಳಿತ ನಡೆಸತಕ್ಕವರು ಸರಿಯಾದ ರೀತಿಯಲ್ಲಿ ಜನಗಳಿಗೆ ಒಂದು ತಿಳುವಳಿಕೆಯನ್ನು ಕೊಡದೆ ಇದ್ದ ಪಕ್ಷದಲ್ಲಿ ಈ ಚುನಾವಣೆಗಳು ನ್ಯಾಯ ಸಮ್ಮತವಾದ ರೀತಿಯಲ್ಲಿ ನಡೆಯಲು ಸಾಧ್ಯವಿಲ್ಲವೆಂದು ನನಗೆ ಕಂಡುಬಂದಿದೆ. ತಾವು ಈ ಚುನಾವಣೆಗಳಲ್ಲಿ ಗೆದ್ದಿರುತ್ತೇವೆಂದು ಹೇಳಿ ಒಂದು ಹೆಮ್ಮೆ ಪಟ್ಟುಕೊಳ್ಳುತ್ತಿರಬಹುದು. ಆದರೆ ಅದಕ್ಕೆ ನಾನಾ ಕಾರಣಗಳಿವೆ. ಈ ಪೈಕಿ ಒಂದು ಮುಖ್ಯ ಕಾರಣವೇನೆಂದರೆ, ಪ್ರತಿಪಕ್ಷದವರಲ್ಲಿ ಸಾಕಷ್ಟು ದಕ್ಷತೆ ಇಲ್ಲದಿರಬಹುದು. ಇದರ ಜೊತೆಗೆ ಈಗಿನ ಚುನಾವಣೆಗಳ ಕಾಲದಲ್ಲಿ ಹಣದ ಚಲಾವಣೆ ಬಹಳ ಜಾಸ್ತಿಯಾಗುತ್ತಾ ಬರುತ್ತಿದೆ. ಇಂಥ ಒಂದು ಹಣದ ಸೌಲತ್ತು ವಿರೋಧ ಪಕ್ಷಕ್ಕೆ ಇಲ್ಲ. ಈ ಒಂದು ಅವಕಾಶವನ್ನು ನಮ್ಮ ಪಕ್ಷದವರು ಸದುಪಯೋಗಪಡಿಸಿಕೊಂಡುದರಿಂದ ತಮ್ಮ ಪಾರ್ಟಿಯ ಗೆಲುವಿಗೆ ಒಂದು ಅವಕಾಶ ಉಂಟಾಗಿರಬಹುದು. ನಮ್ಮ ಸೋಲನ್ನೇ ನೋ ನಾವು ಒಪ್ಪಿಕೊಳ್ಳುತ್ತೇವೆ. ಅಂತೂ, ನಿಮ್ಮ ಪಕ್ಷದ ಗೆಲುವಿಗೆ ನಾನಾ ಕಾರಣಗಳಿವೆ. ಪ್ರಜಾಪ್ರಭುತ್ವಾಡಳಿತ ಜಾರಿಗೆ ಬರುವ ಮುನ್ನ, ಎಂದರೆ 1947ಕ್ಕೆ ಹಿಂದೆ, ಈ ಕಾಂಗ್ರೆಸ್ ಪಕ್ಷವು ಒಂದು ಏಕ ರಾಜಕೀಯ ಪಕ್ಷವಾಗಿತ್ತು. ಇದರಿಂದ ದೇಶದಲ್ಲಿರತಕ್ಕ ಪ್ರತಿಯೊಂದು ವ್ಯಕ್ತಿಯ ಪುರಸ್ಕಾರ, ಸಹಕಾರ, ಸೌಹಾರ್ದ ಇತ್ಯಾದಿಗಳೆಲ್ಲಾ ಈ ಕಾಂಗ್ರೆಸ್ ಪಕ್ಷಕ್ಕೆ ದೊರೆಯಲು ಅವಕಾಶವುಂಟಾಯಿತು. ಹೀಗೆ ನಾನಾ ಕಾರಣಗಳಿಂದ ಈ ಪಾರ್ಟಿ ಚುನಾವಣೆಯಲ್ಲಿ ಆರಿಸಿಬರಲು ಅವಕಾಶವಿರುತ್ತದೆ. ಯಾವ ಕಾಂಗ್ರೆಸ್ ಸಂಸ್ಥೆ 1947ನೆಯ ಇಸವಿಯ ಹಿಂದೆ ಇತ್ತೋ ಅದು ಏಕ ರಾಜಕೀಯ ಪಕ್ಷವಾಗಿ ಇದ್ದುದರಿಂದ ಇಡೀ ದೇಶಕ್ಕೇ ಅದರಿಂದ ಒಂದು ಮಹದುಪಕಾರ ಉಂಟಾಗಬಹುದೆಂದು ನಾವೆಲ್ಲರೂ ನಿರೀಕ್ಷಿಸಿದ್ದೆವು. ಆದರೆ ಆ ನಮ್ಮ ನಿರೀಕ್ಷಣೆಗಳೆಲ್ಲ ನಿರ್ನಾಮವಾಗಿ ಹೋಗಿವೆ. ಮೊಟ್ಟ ಮೊದಲನೆಯದಾಗಿ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ, ಸಾಕಷ್ಟು ತಿಳಿವಳಿಕೆ ಉಂಟಾಗುವಂತೆ ಮಾಡತಕ್ಕದ್ದು ಪ್ರತಿಯೊಂದು ಡೆಮಾಕ್ರೆಟಿಕ್ ಪಾರ್ಟಿಯ ಪ್ರಥಮ ಕರ್ತವ್ಯವಾಗಿದೆ. ಹೀಗೆ ಒಂದು ಸರಿಯಾದ ಪ್ಲಾನಾರ್ಜನೆಯನ್ನು ಮಾಡಲು ಜನ